# ಪ್ರಧಾನ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 963/ 2019**

| | | |
|---|---|---|
| ಸಾಕ್ಷಿಯ ಹೆಸರುಃ | ನೀಲಕಂಠಪ್ಪ ಕತ್ತಿ | ಫ್ರಾಸಾಃ 02 |
| ತಂದೆ ಹೆಸರುಃ | ಶಾಂತಪ್ಪ | ಚಾಸಾಃ 03 |
| ವಯಸ್ಸುಃ | 36 ವರ್ಷ | ದಿಃ 14-01-2026 |
| ಉದ್ಯೋಗಃ | ಅಬಕಾರಿ ರಕ್ಷಕ ಯಾದಗಿರಿ ವಲಯ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ನಾನು ದಿಃ 02-11-2016 ರಿಂದ ಇಲ್ಲಿಯವರೆಗೆ ಯಾದಗಿರಿ ವಲಯದ ಅಬಕಾರಿ ಇಲಾಖೆಯಲ್ಲಿ ಅಬಕಾರಿ ಪೇದೆ ಎಂದು ಸೇವೆ ಸಲ್ಲಿಸುತ್ತಿದ್ದೇನೆ.

ದಿನಾಂಕ 05.04.2019 ರಂದು ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ನಾನು ಚಾಸಾಃ1 ರವರೊಂದಿಗೆ ಸೈದಾಪೂರ ಗ್ರಾಮದ ಅಸು-ಪಾಸಿನಲ್ಲಿ ಗಸ್ತು ಮಾಡುತ್ತಿದ್ದಾಗ ಸಾಃ 7-15 ಗಂಟೆಗೆ ನೀಲಹಳ್ಳಿ ಗ್ರಾಮದ ಹತ್ತಿರ ಅಕ್ರಮ ಮದ್ಯ ಸಾಗಾಟ ನಡೆದಿರುವ ಬಗ್ಗೆ ಚಾಸಾಃ 1 ರವರಿಗೆ ಮಾಹಿತಿ ಬಂದಿರುತ್ತದೆ. ನಾವುಗಳು ನೀಲಹಳ್ಳಿ ಕ್ರಾಸ್ ಹತ್ತಿರ ಹೋಗಿ ಸಾರ್ವಜನಿಕರನ್ನು ಪಂಚರಾಗಿ ಬರುವಂತೆ ಕೇಳಿಕೊಂಡಾಗ ಚಾಸಾಃ 2 ರವರು ಮಾತ್ರ ಒಪ್ಪಿಕೊಂಡು ನಮ್ಮೊಂದಿಗೆ ಬಂದಿದ್ದರು. ಆದ್ದರಿಂದ ನನ್ನನ್ನು ಇನ್ನೊಬ್ಬ ಪಂಚನನ್ನಾಗಿ ನೇಮಕ ಮಾಡಿಕೊಂಡಿದ್ದರು. ನಂತರ ರಸ್ತೆಗಾವಲು ಮಾಡುತ್ತಿದ್ದಾಗ ಸೈದಾಪೂರ ಕಡೆಯಿಂದ ಒಂದು ಬೈಕ್ ಬರುತ್ತಿರುವುದು ಕಂಡುಬಂದಿರುತ್ತದೆ. ಸದರಿ ಬೈಕನ್ನು ತಡೆದು ನಿಲ್ಲಿಸಿದಾಗ ಬೈಕ್ ಸವಾರರು ಗಾಬರಿಗೊಂಡಿರುವುದು ಕಂಡುಬಂದಿದ್ದರಿಂದ ಸಂಶಯ ಬಂದು ಚಾಸಾಃ 1 ರವರು ಸ್ಥಳದಲ್ಲಿ ಶೋಧನಾ ಪತ್ರ ತಯಾರಿಸಿಕೊಂಡು ಪರಿಶೀಲನೆ ಮಾಡಿದಾಗ ಬೈಕಿನ ಹಿಂಬದಿ ಸವಾರ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 330 ಮಿಲಿಯ 24 ಕೆಎಫ್ ಸ್ಟ್ರಾಂಗ ಬಿಯಾರ್ ಬಾಟಲಿಗಳನ್ನು ಹಾಗೂ ಬೈಕಿನ ಪೆಟ್ರೋಲ್ ಟಾಂಕಿನ ಮೆಲೆ 10 ಲೀ. ಕಲಬೆರಕೆ ಸೇಂದಿ ಇರುವುದು ಕಂಡುಬಂದಿರುತ್ತದೆ. ಬೈಕ್ ಕಪ್ಪು ಬಣ್ಣದ ಹಿರೋ ಪ್ಯಾಷನ್ ಆಗಿದ್ದು ನೊಂದಣಿ ನಂ.ಕೆಎ07 ಹೆಚ್ ಎಂ 4429 ಆಗಿರುವುದು ಕಂಡುಬಂದಿರುತ್ತದೆ. ಬೈಕ್ ಸವಾರರ ಹೆಸರು ವಿಳಾಸ ಕೇಳಲಾಗಿ ಮಲ್ಲಪ್ಪ ತಂದೆ ಅಯ್ಯಪ್ಪ ಹಾಗೂ ಬನ್ನಪ್ಪ ತಂದೆ ಈರ್ ದಿಮ್ಮಣ್ಣ, ಸಾಃ

ಕಾಳೆಬೆಳಗುಂದಿ ಎಂದು ತಿಳಿಸಿದ್ದರು. ನಂತರ ಒಂದು ಬಿಯಾರ್ ಬಾಟಲಿಯನ್ನು ಹಾಗೂ ಒಂದು ಲೀಟರ್ ಕಲಬೆರಕೆ ಸೇಂದಿಯನ್ನು ರಾಸಾಯನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೆವು. ಸ್ಥಳದಲ್ಲಿ ಸಾಃ 7.30 ರಿಂದ 8.30 ವರೆಗೆ ಪಂಚನಾಮೆ ಮಾಡಿರುತ್ತೇವೆ. ನಂತರ ದೊರೆತ ಮು.ಮಾಲು, ಬೈಕ್ ಹಾಗೂ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಕಚೇರಿಗೆ ಬಂದಿದ್ದು, ಆ ನಂತರ ಚಾಸಾಃ 1 ರವರು ಸರಕಾರದ ಪರವಾಗಿ ದೂರು ದಾಖಲಿಸಿಕೊಂಡಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಆತ ಘಟನೆಯ ದಿನ ಬೈಕ್ ಚಾಲನೆ ಮಾಡುತ್ತಿದ್ದ ವ್ಯಕ್ತಿ ಆಗಿರುತ್ತಾನೆ ಎಂದು ನುಡಿಯುತ್ತಾರೆ. 2 ನೇ ಆರೋಪಿ ಗೈರು ಹಾಜರು ಇದ್ದು, ಅವರ ಪರ ವಕೀಲರು 2 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ನ್ಯಾಯಾಲಯದ ಮುಂದೆ ಇರುವ 01 ಖಾಲಿ ಬಿಯರ್ ಬಾಟಲ್ ಮತ್ತು ಒಂದು ಖಾಲಿ ಪ್ಲಾಸ್ಟಿಕ್ ಬಾಟಲಿಯನ್ನು ನೋಡಿ ಅವುಗಳು ಮಾದರಿ ಬಾಟಲಿಗಳು ಆಗಿರುತ್ತವೆ ಎಂದು ನುಡಿದಿದ್ದು, ಅವುಗಳನ್ನು ಕ್ರಮವಾಗಿ ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು.

ನಿಪಿ-1 ರ ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ವಿ ಎಸ್ ಪಿ ವಕೀಲರಿಂದಃ

ಮಾಹಿತಿ ಬಂದಾಗ ನಾವು ಸೈದಾಪೂರದ ಕರಿಬೆಟ್ಟ ಕ್ರಾಸಿನ ಹತ್ತಿರ ಇದ್ದೆವು. ಸದರಿ ಸ್ಥಳದಿಂದ ನೀಲಹಳ್ಳಿ ಗ್ರಾಮ ಸುಮಾರು 4-5 ಕಿಮೀ ದೂರ ಆಗುತ್ತದೆ. ಸೈದಾಪೂರದಿಂದ ಕರಿಬೆಟ್ಟ ಕ್ರಾಸ್ ಮಾರ್ಗವಾಗಿಯೇ ನೀಲಹಳ್ಳಿ ಗ್ರಾಮಕ್ಕೆ ಹೋಗಬೇಕಾಗುತ್ತದ ಎಂದರೆ ಸರಿ. ನಮಗೆ ಮಾಹಿತಿ ಬಂದಾಗ ಸಾಃ 7-15 ಗಂಟೆ ಆಗಿತ್ತು. ಚಾಸಾಃ 2 ರವರು ನೀಲಹಳ್ಳಿ ಕ್ರಾಸ್ ಹತ್ತಿರ ಇದ್ದರು. ಚಾಸಾಃ 2 ರವರು ಕಾಳಬೆಳಗುಂದಿ ಗ್ರಾಮದವರಾಗಿರುತ್ತಾರೆ ಎಂದರೆ ಸರಿ. ಮಾಹಿತಿ ಬಂದ ನಂತರ 5-6 ನಿಮಿಷಗಳಲ್ಲಿ ನಾವು ಗುನ್ನೆಜಾಗಕ್ಕೆ ಹೋಗಿದ್ದೆವು. ನಾವು ಗುನ್ನೆಜಾಗದಲ್ಲಿ ಬೇರೆ ಒಂದೆರಡು ವಾಹನಗಳನ್ನು ತಪಾಸಣೆ ಮಾಡಿದ್ದೆವು. ಆರೋಪಿತರು ಸೈದಾಪೂರ ಕಡೆಯಿಂದ ಬಂದಿದ್ದರು.

1 ನೇ ಆರೋಪಿ ಬೈಕ್ ಚಾಲನೆ ಮಾಡುತ್ತಿದ್ದರು ಎಂಬುದನ್ನು ಪಂಚನಾಮೆಯಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ನಿಖರವಾಗಿ ನಮೂದಿಸಿಲ್ಲ. ಪೆಟ್ರೋಲ್ ಟ್ಯಾಂಕಿನ ಮೇಲಿಪಿನ ಚೀಲದಲ್ಲಿ ಒಂದು ಪ್ಲಾಸ್ಟಿಕ್ ಕ್ಯಾರಿಬ್ಯಾಗಿನಲ್ಲಿ ಸೆಂದಿ ಇತ್ತು. ಸೇಂದಿ ಪ್ಲಾಸ್ಟಿಕ್ ಕ್ಯಾರಿಬ್ಯಾಗಿನಲ್ಲಿ ಇತ್ತು ಎಂಬುದನ್ನು ಪಂಚನಾಮೆ ಹಾಗೂ ನನ್ನ ಹೇಳಿಕೆಯಲ್ಲಿ ನಿಖರವಾಗಿ ನಮೂದಿಸಿಲ್ಲ. ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾರಿಬ್ಯಾಗಿನಲ್ಲಿ ಇತ್ತು. ಚೀಲವೂ ಸಹ ಬಿಳಿ ಬಣ್ಣದ್ದು ಆಗಿತ್ತು. ಸದರಿ ಚೀಲ ಮತ್ತು ಕ್ಯಾರಿಬ್ಯಾಗನ್ನು ಸಹ ಸ್ಥಳದಿಂದ ಜಪ್ತಿ ಮಾಡಿಕೊಂಡಿದ್ದೆವು. ಒಂದು ಗಂಟೆ ಕಾಲ ಶೋಧನೆ ಹಾಗೂ ಜಪ್ತಿ ಪಂಚನಾಮೆ ಮಾಡಿದ್ದೆವು.

ಪಂಚನಾಮೆಯನ್ನು ಚಾಸಾಃ 1 ರವರು ಬರೆದಿರುತ್ತಾರೆ. ಆಗ ಗುನ್ನೆಜಾಗದಲ್ಲಿ ಲೈಟಿನ ಬೆಳಕು ಇರಲಿಲ್ಲ ಎಂದರೆ ಸರಿ. ಶಂಕರ್ ಮೇಧಾರ ಎಂಬಾತ ಆಗ ನಮ್ಮ ವಾಹನದ ಚಾಲಕ ಆಗಿದ್ದರು. ನಾನು, ಚಾಸಾಃ 1 ಮತ್ತು ವಾಹನದ ಚಾಲಕ ಶಂಕರ ರವರು ಸೇರಿದಂತೆ ಮೂರು ಜನ ಗಸ್ತು ಕರ್ತವ್ಯಕ್ಕೆ ಹೋಗಿದ್ದೆವು.

ನಾವು ಯಾವುದೇ ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಮು.ಮಾಲಿಗೂ ಯಾವುದೇ ಸಂಬಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗೊಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿಕೊಡಿದ್ದೆವೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಯವರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ